ದಿನಾಂಕ:08-09-2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ವಾದಿ ನನ್ನ ಮಗಳು ಎಂದರೆ ಸರಿ. 2ನೇ ಪ್ರತಿವಾದಿ ನನ್ನ ಹೆಂಡತಿ ಸರಿ. 3 ರಿಂದ 6ನೇ ಪ್ರತಿವಾದಿಯರು ನನ್ನ ಹೆಣ್ಣು ಮಕ್ಕಳು ಎಂದರೆ ಸರಿ. 5ನೇ ವಾದಿ ಚಂದ್ರಕಲಾ ಮೃತಪಟ್ಟಿದ್ದಾಳೆಂದರೆ ಸರಿ. 7ನೇ ಪ್ರತಿವಾದಿ ನನ್ನ ಅಳಿಯನಾಗಬೇಕು. 8ನೇ ಪ್ರತಿವಾದಿ ನಮ್ಮ ಕುಟುಂಬದವರಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಪೂರ್ವಜರಿಂದ ವಾಂಟಣಿ ಮೂಲಕ ನನಗೆ ಬಂದಿವೆ ಎಂದರೆ ಸರಿ. ನನಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ದಾವಾ ಆಸ್ತಿಗಳು ನನ್ನ ಹೆಸರಿಗೆ ಬಂದಿರುತ್ತವೆ. ನಮ್ಮ ತಂದೆ ಮೃತಪಟ್ಟ ನಂತರ ನಾನು ಮತ್ತು ನನ್ನ ಸಹೋದರ ವಿಭಾಗ ಮಾಡಿಕೊಂಡಿದ್ದೇವೆಂದರೆ ಸರಿ. ವಿಭಾಗಪತ್ರವು ಸಬ್‌ರಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಆಗಿದೆ ಎಂದರೆ ಸರಿ. ನನ್ನ ಹೆಸರಿಗೆ ಬಂದ ಆಸ್ತಿಗಳು ದಾವಾ ಆಸ್ತಿಗಳು ಎಂದರೆ ಸರಿ. ಹಳಕಾರ ಗ್ರಾಮದಲ್ಲಿ ಗುನಗ ರ ಕುಟುಂಬ ಎಂದರೆ ಪ್ರತಿಷ್ಠಿತ ಕುಟುಂಬ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ದೇವಸ್ಥಾನದಲ್ಲಿ ಪೂಜಾ ಮಾಡುವ ಹಕ್ಕು ಇರುವುದಿಲ್ಲ. ನನ್ನ ಭಾಗಕ್ಕೆ ಬಂದ ಜಮೀನುಗಳಿಂದ ಬರುವ ಉತ್ಪನ್ನ ನಮ್ಮ ಜೀವನಕ್ಕೆ ಸಾಕಾಗುತ್ತದೆ ಎಂದರೆ ಸರಿಯಲ್ಲ. ನಾವು ಈ ಮೊದಲು ಮಣ್ಣಿನ ಮಡಿಕೆ ತಯಾರಿಸುತ್ತಿದ್ದೆವು ಎಂದರೆ ಸರಿ. ಮೊದಲು ಮಡಿಕೆಗಳನ್ನು ಮಾಡಿ ಕುಮಟಾ-ಹೊನ್ನಾವರ ತಾಲೂಕುಗಳಲ್ಲಿ ಮಾರಾಟ ಮಾಡುತ್ತಿದ್ದೆವು ಎಂದರೆ ಸರಿ. ನನಗೆ ವಿಭಾಗದಲ್ಲಿ ನನ್ನ ಅಣ್ಣನಿಗೆ ಹೋದಷ್ಟು ಜಮೀನು ನನ್ನ ಪಾಲಿಗೆ ಬಂದಿದೆ ಎಂದರೆ ಸಾಕ್ಷಿ 6 ಗುಂಟೆ ಬಂದಿದೆ ಎಂದು ಉತ್ತರಿಸಿರುತ್ತಾರೆ. ನನ್ನ ಮತ್ತು ನನ್ನ ಸಹೋದರನ ಮಧ್ಯದಲ್ಲಿ ಯಾವ ವರ್ಷದಲ್ಲಿ ವಿಭಾಗವಾಗಿದೆವೆಂದು ನನಗೆ ಗೊತ್ತಿಲ್ಲ. 2011-12 ರಲ್ಲಿ ನೋಂದಣಿ ಆಗಿದೆ ಎಂದರೆ ಸಾಕ್ಷಿ ನನಗೆ ಇಷ್ಟೇ ಗೊತ್ತಾಗುವುದಿಲ್ಲವೆನ್ನುತ್ತಾರೆ. ನನ್ನ ಹೆಣ್ಣುಮಕ್ಕಳಿಗೆ ಕಾಲ ಕಾಲಕ್ಕೆ ಶಿಕ್ಷಣವನ್ನು ನಾನೇ ಕೊಡಿಸಿದ್ದೇನೆಂದರೆ ಸರಿ. ನನ್ನ ಹೆಣ್ಣು ಮಕ್ಕಳು ಪ್ರಾಯಕ್ಕೆ ಬಂದ ನಂತರ ಯೋಗ್ಯ ವರ ಹುಡುಕಿ ಮದುವೆ ಮಾಡಿಕೊಟ್ಟಿದ್ದೇನೆಂದರೆ ಸರಿ. ನಾನು ಸಂಪ್ರದಾಯಬದ್ಧವಾಗಿ ಮದುವೆ ಮಾಡಿಕೊಟ್ಟಿದ್ದೇನೆ. ಮದುವೆಯಾದ ನಂತರ ಹೆಣ್ಣುಮಕ್ಕಳು ತಮ್ಮ ತಮ್ಮ ಗಂಡನ ಮನೆಯಲ್ಲಿದ್ದಾರೆಂದರೆ ಸರಿ. ಈಗ ನನ್ನ ಯೋಗಕ್ಷೇಮ ನೋಡಿಕೊಳ್ಳಲು ನನ್ನ ಮಗಳು ಹಾಗೂ ನನ್ನ ಅಳಿಯ ಬಂದಿದ್ದಾರೆಂದು ಸ್ವಇಚ್ಛೆಯಿಂದ ಹೇಳುತ್ತಾರೆ. ನನಗೆ ಸೀತಾರಾಮ

ಗುನಗ ರವರ ಪರಿಚಯ ಇತ್ತು. ಈಗ ಅವರು ಜೀವಂತವಿದ್ದಾರೆನ್ನುವದು ನನಗೆ ಗೊತ್ತಿಲ್ಲ. ನನ್ನ ಯೋಗಕ್ಷೇಮ ನೋಡಿಕೊಳ್ಳಲು ಯಾರೂ ಇಲ್ಲವೆಂದು 5 ಮತ್ತು 7ನೇ ಪ್ರತಿವಾದಿ ಯರನ್ನು ಕರೆದುಕೊಂಡು ಬಂದು ಇಟ್ಟುಕೊಂಡಿದ್ದೇನೆಂದರೆ ಸರಿ. ನನಗೆ ಬಂದ ಆಸ್ತಿಗಳಲ್ಲಿ ನನಗೆ ಮತ್ತು ನನ್ನ ಹೆಣ್ಣುಮಕ್ಕಳಿಗೆ ಸಮನಾದ ಭಾಗಾಂಶದ ಹಕ್ಕು ಇದೆ ಎಂದರೆ ಸರಿ. 6ನೇ ಪ್ರತಿವಾದಿ ನನ್ನ ಕಿರಿಯ ಮಗಳಾಗಿದ್ದಾಳೆ. ಅವಳ ಮದುವೆ ಆಗಿ 20 ವರ್ಷ ಆಗಿರಬಹುದು. ವಾದಿ ಮತ್ತು 3ನೇ ಪ್ರತಿವಾದಿಯರು ಹಳಕಾರ ಗ್ರಾಮದಲ್ಲಿ ವಾಸ ಮಾಡುತ್ತಾರೆಂದರೆ ಸರಿ. ವಾದಿ ಮತ್ತು 3ನೇ ಪ್ರತಿವಾದಿಯು ನಮ್ಮ ಮನೆಗೆ 3-4 ಬಾರಿ ಬಂದು-ಹೋಗಿ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರು ನಮ್ಮ ಮನೆಗೆ ಉಂಡು ತಿಂದು ಹೋಗಲು ಮಾತ್ರ ಬರುತ್ತಿದ್ದರುಎಂದು ನುಡಿಯುತ್ತಾರೆ. ವಾದಿಯು ನಮ್ಮ ಮನೆಗೆ ಬಂದು ನಮಗೆ ಯಾವುದೇ ರೀತಿಯ ಸಹಾಯ ಮಾಡಿರುವುದಿಲ್ಲ. ನನ್ನ ಮಗಳಾದ ಚಂದ್ರಕಲಾಗೆ ವಾಲಗಳ್ಳಿಗೆ ಮದುವೆ ಮಾಡಿಕೊಟ್ಟಿದ್ದೇನೆಂದರೆ ಸರಿ. ಈಗ 2 ವರ್ಷಗಳ ಹಿಂದೆ ಆಕೆ ಮೃತಪಟ್ಟಿದ್ದಾಳೆ. 6ನೇ ಪ್ರತಿವಾದಿಯು ಸಹ ಹಳಕಾರದಲ್ಲಿ ವಾಸವಾಗಿದ್ದಾಳೆ. 7ನೇ ಪ್ರತಿವಾದಿಯ ಮೂಲ ಮನೆ ವಾಲಗಳ್ಳಿಯಲ್ಲಿದೆ. ಆತನು ನನ್ನ ಸಲುವಾಗಿ ನನ್ನ ಮನೆಗೆ ಬಂದು ಉಳಿದುಕೊಂಡಿದ್ದಾನೆಂದು ಸ್ವಇಚ್ಛೆಯಿಂದ ನುಡಿಯುತ್ತಾರೆ. ನಮ್ಮ ವಕೀಲರಿಗೆ ಯಾರು ಮಾಹಿತಿ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿಯ ಮಕ್ಕಳಾದ ರವಿರಾಜ ಹಾಗೂ ಗುರುರಾಜ ನನ್ನ ಮನೆಯಲ್ಲಿಯೇ ಇದ್ದಾರೆ. ಅವರು ನಮ್ಮ ಮನೆಯಲ್ಲಿಯೇ ಹುಟ್ಟಿದ್ದಾರೆ. 7ನೇ ಪ್ರತಿವಾದಿ 6-8 ವರ್ಷಗಳಿಂದ ನಮ್ಮ ಮನೆಯಲ್ಲಿ ಬಂದು ಉಳಿದುಕೊಂಡಿದ್ದಾನೆ. 2ನೇ ಪ್ರತಿವಾದಿ ಓಡಾಡಿಕೊಂಡಿದ್ದಾಳೆಂದರೆ ಸರಿಯಲ್ಲ. 7ನೇ ಪ್ರತಿವಾದಿ ನನ್ನ ಮನೆಯಲ್ಲಿದ್ದು ನನ್ನನ್ನು ನೋಡಿಕೊಳ್ಳುತ್ತಾನೆಂದು ಆಸ್ತಿ ಬರೆದುಕೊಟ್ಟಿದ್ದೇನೆ. 7ನೇ ಪ್ರತಿವಾದಿ ನನ್ನ ಯೋಗಕ್ಷೇಮ ನೋಡಿಕೊಳ್ಳುತ್ತಾನೆಂದು ನಾನು ದಸ್ತವೇಜನ್ನು ಬರೆದು ಕೊಟ್ಟಿದ್ದೇನೆ. ನಾನು ಆತನಿಂದ ಹಣ ಪಡೆದಿರುವುದಿಲ್ಲ. ನಾನು7ನೇ ಪ್ರತಿವಾದಿಗೆ ಬರೆದುಕೊಟ್ಟ ಆಸ್ತಿಗಳಲ್ಲಿ ಎಲ್ಲ ಹೆಣ್ಣು ಮಕ್ಕಳಿಗೆ ಆಸ್ತಿ ಇದೆ ಎಂದು ಸಾಕ್ಷಿ ಅದಕ್ಕಾಗಿ ಮೊದಲೇ ಬರೆದುಕೊಟ್ಟಿದ್ದೇನೆಂದು ಉತ್ತರಿಸುತ್ತಾರೆ. 7ನೇ ಪ್ರತಿವಾದಿಗೆ ಬರೆದುಕೊಟ್ಟ ಆಸ್ತಿಯಲ್ಲಿ ನನ್ನ ಹೆಣ್ಣುಮಕ್ಕಳಿಗೆ ಈಗಲೂ ಪಾಲು ಇದೆ ಎಂದರೆ ಸರಿಯಲ್ಲ. ನಾನು 7ನೇ ಪ್ರತಿವಾದಿಗೆ ದಸ್ತವೇಜು ಬರೆದುಕೊಡುವಾಗ ಎಲ್ಲಾ ಹೆಣ್ಣುಮಕ್ಕಳ ಕಬೂಲಿ ತೆಗೆದುಕೊಂಡಿಲ್ಲವೆಂದರೆ ಸಾಕ್ಷಿ ಎಲ್ಲ ಹೆಣ್ಣುಮಕ್ಕಳು ನನ್ನ ಯೋಗಕ್ಷೇಮ ನೋಡಿಲ್ಲವಾದ್ದರಿಂದ ಅವರ ಕಬೂಲಿ ಪಡೆದುಕೊಂಡಿಲ್ಲವೆನ್ನುತ್ತಾರೆ. 7ನೇ

ಪ್ರತಿವಾದಿಗೆ ನಾನು ದಾವಾ ಆಸ್ತಿಯನ್ನು ದಸ್ತು ಮಾಡಿಕೊಡುವ ಹಕ್ಕುವಿಲ್ಲವೆನ್ನುವದು ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದರಿಂದ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಿವಿಲ್ ಜಡ್ಜ್ ಕುಮಟಾ